# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 240 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 6-3-2025 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನಲ್ಲಿ ಪಿಲಿಕುಳ ಪ್ರಾಧಿಕಾರವನ್ನು ಪಿಲಿಕುಳ ಮಂಡಳಿಯನ್ನಾಗಿ ಮಾರ್ಪಡಿಸುವ ಬಗ್ಗೆ ಮನವಿ ಸರ್ಕಾರಕ್ಕೆ ಈಗಾಗಲೇ ಸಲ್ಲಿಕೆಯಾಗಿದ್ದು, ಈ ಕುರಿತು ಪ್ರಸ್ತಾವನೆ ಯಾವ ಹಂತದಲ್ಲಿದೆ ಮತ್ತು ಸದರಿ ಕಡತವು ಯಾರ ಹಂತದಲ್ಲಿ ವಿಲೆವಾರಿಗೆ ಬಾಕಿಯಿದೆ; ಈ ರೀತಿ ಬಾಕಿಯಾಗಲು ಕಾರಣಗಳೇನು; ಈ ಪ್ರಸ್ತಾವನೆಯ ಬಗ್ಗೆ ಅಗತ್ಯ ಕ್ರಮ ವಹಿಸಲು ಕಾಲಮಿತಿ ನಿಗಧಿಪಡಿಸಲಾಗಿದೆಯೇ; | ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮವು ಕಳೆದ 2 ದಶಕಗಳ ಹಿಂದೆ ಮೂಡುಶೆಡ್ಡೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಸುಮಾರು 356 ಎಕರೆ ಪ್ರದೇಶದಲ್ಲಿ ಪ್ರಾರಂಭವಾಗಿರುತ್ತದೆ.<br><br>ಪಿಲಿಕುಳ ನಿಸರ್ಗಧಾಮವನ್ನು ಸಮಗ್ರ ಉನ್ನತೀಕರಣಗೊಳಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಅಧಿಸೂಚನೆ ಮತ್ತು ಸಂವ್ಯಶಾಇ 08 ಶಾಸನ 2018 ದಿ: 09-03-2018ರಂತೆ ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಮತ್ತು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಒಟ್ಟುಗೂಡಿಸಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ 2018 ಎಂಬುದಾಗಿ ಕಾಯಿದೆಯ ಮೂಲಕ ರಚಿಸಿ ಆದೇಶಿಸಿದೆ.<br><br>ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಸಮಿತಿ ಇರುತ್ತದೆ. ಹಾಗೂ ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಲಹಾ ಸಮಿತಿ ಇರುತ್ತದೆ.<br><br>ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವನ್ನು ಪಿಲಿಕುಳ ಅಭಿವೃದ್ಧಿ ಮಂಡಳಿಯನ್ನಾಗಿ ಪರಿವರ್ತಿಸುವಂತೆ ಜನಪ್ರತಿನಿಧಿಗಳಿಂದ ದಿನಾಂಕ 23/12/2024ರಂದು ಮನವಿ ಸ್ವೀಕರಿಸಲಾಗಿದೆ. ಈ ಮನವಿಯ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಇವರಿಗೆ ದಿನಾಂಕ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | 07/02/2025 ರಂದು ಪತ್ರವನ್ನು ಬರೆಯಲಾಗಿದೆ. ಈ ಸಂಬಂಧ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಿಂದ ಸಹ ವರದಿ ಕೋರಲಾಗಿದೆ. |
| ಆ) | ಪಿಲಿಕುಳ ಪ್ರಾಧಿಕಾರವನ್ನು ಪಿಲಿಕುಳ ಮಂಡಳಿಯನ್ನಾಗಿ ಮಾಡುವ ಬಗ್ಗೆ ಈಗಿರುವ ಪಿಲಿಕುಳ ಪ್ರಾಧಿಕಾರದಿಂದ ಮತ್ತು ಅದಕ್ಕೆ ಸಂಬಂಧಪಟ್ಟ ಇಲಾಖೆಗಳಿಂದ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಾಗಿದೆಯೇ; ಹಾಗೆಯೇ ಕಾನೂನು ಸಮಾಲೋಚನೆ ಮಾಡಿ ಕಾರ್ಯಸಾಧ್ಯತಾ ವರದಿಯನ್ನು (Feasibility report) ತಯಾರಿಸಲಾಗಿದೆಯೇ; ಇಲ್ಲದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ತಯಾರಿಸಲಾಗುವುದು; | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವನ್ನು ಪಿಲಿಕುಳ ಅಭಿವೃದ್ಧಿ ಮಂಡಳಿಯನ್ನಾಗಿ ಪರಿವರ್ತಿಸುವ ಬಗ್ಗೆ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಇವರಿಂದ ಪ್ರಾಥಮಿಕ ವರದಿ ನಿರೀಕ್ಷಿಸಲಾಗಿದೆ. ವರದಿ ಬಂದ ನಂತರ ಸಾಧಕ-ಬಾಧಕಗಳನ್ನು ಪರಿಶೀಲಿಸಿ ಕ್ರಮ ವಹಿಸಲಾಗುವುದು. |
| ಇ) | ಪಿಲಿಕುಳ ಪ್ರಾಧಿಕಾರದಲ್ಲಿ ಮೃಗಾಲಯ ಮತ್ತು ವಿಜ್ಞಾನ ಕೇಂದ್ರಗಳ ನಿರ್ವಹಣೆ ಮೇಲ್ವಿಚಾರಣೆಗೆ ಪೂರ್ಣಕಾಲಿಕ ಅಧಿಕಾರಿಗಳ ಅನುಪಸ್ಥಿತಿಯ ಕಾರಣ ಪಿಲಿಕುಳ ನಿಸರ್ಗಧಾಮದ ನೈಜ ತಳ ಹಂತದ ವರದಿ (ground report) ಸಂಬಂಧಪಟ್ಟವರಿಗೆ ತಲುಪದೆ ಅಗತ್ಯ ಕ್ರಮವಹಿಸಲು ಇಲಾಖೆಗೆ ಸಾಧ್ಯವಾಗದಿರುವುದರಿಂದ ಪೂರ್ಣಕಾಲಿಕ ಅಧಿಕಾರಿಗಳ ನೇಮಕ ಬಗ್ಗೆ ಇಲಾಖೆ ಏನು ಕ್ರಮವಹಿಸುತ್ತಿದೆ? | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಡಿಯಲ್ಲಿ ಬರುವ ಪಿಲಿಕುಳ ಜೈವಿಕ ಉದ್ಯಾನವನಕ್ಕೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ತತ್ಸಮಾನ ವೃಂದದ ನಿರ್ದೇಶಕರು (ಜೈವಿಕ ಉದ್ಯಾನವನ) (ವೇತನ ಶ್ರೇಣಿ ರೂ.83,700-1,55,200) ಒಂದು ಹುದ್ದೆಯನ್ನು ಸೃಜಿಸಿ ಆದೇಶಿಸಿದೆ. ಈ ಹುದ್ದೆಗೆ ಸೂಕ್ತ ಅಧಿಕಾರಿಯನ್ನು ನಿಯೋಜನೆ ಮೇಲೆ ನಿಯುಕ್ತಿಗೊಳಿಸುವಂತೆ ದಿನಾಂಕ 19/09/2024 ಮತ್ತು 04/12/2024ರಂದು ಅರಣ್ಯ ಇಲಾಖೆಯನ್ನು ಕೋರಲಾಗಿದೆ.<br><br>ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಚಟುವಟಿಕೆಗಳನ್ನು ಸಂಯೋಜಿಸಲು, ಮೇಲ್ವಿಚಾರಣೆ ಮಾಡಲು ಹಾಗೂ ಕಾರ್ಯನಿರ್ವಹಣೆಯ ಹಿತದೃಷ್ಟಿಯಿಂದ ಒಂದು ಆಯುಕ್ತರ ಹುದ್ದೆ (2024ರ ಪರಿಷ್ಕೃತ ವೇತನ ಶ್ರೇಣಿ ರೂ.1,18,700 - 1,75,200) ಯನ್ನು ಸೃಜಿಸಿ ನಿಯೋಜನೆ ಮೇಲೆ ಭರ್ತಿ ಮಾಡಿಕೊಳ್ಳಲು ಆದೇಶಿಸಿದೆ. ಸದರಿ ಹುದ್ದೆಗೆ ಉಪನಿರ್ದೇಶಕರು, ಪಶು ಸಂಗೋಪನೆ ಇಲಾಖೆ ಇವರನ್ನು ಪ್ರಸ್ತುತ ಹೆಚ್ಚುವರಿ ಪ್ರಭಾರದಲ್ಲಿರಿಸಲಾಗಿದೆ. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಮೇಲಿನ 02 ಹುದ್ದೆಗಳನ್ನು ಹೊರತುಪಡಿಸಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಮಂಗಳೂರಿನ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ವಿವಿಧ ದರ್ಜೆಯ 20 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ 7 ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. |
| ಈ) | ಪಿಲಿಕುಳ ನಿಸರ್ಗಧಾಮದ ಸಿಬ್ಬಂದಿಗಳಿಗೆ ಕಳೆದ 20 ವರ್ಷಗಳಿಂದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸದೆ ಇರಲು ಕಾರಣಗಳೇನು; ಈ ವಿಷಯ ಪ್ರಸ್ತುತ ಇಲಾಖೆಯ ಗಮನಕ್ಕೆ ಬಂದಿದ್ದು ಇನ್ನು ಎಷ್ಟು ಅವಧಿಯೊಳಗೆ ಸಮಸ್ಯೆಗೆ ಪರಿಹಾರ ರೂಪಿಸಲು ಕ್ರಮವಹಿಸಲಾಗುವುದು? | ಈ ಹಿಂದೆ ಪಿಲಿಕುಳ ನಿಸರ್ಗಧಾಮವು ಸೊಸೈಟಿಯಾಗಿ ರಚನೆಗೊಂಡು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಆದರೆ ಸದರಿ ಸೊಸೈಟಿಗೆ ಸರ್ಕಾರದಿಂದ ಯಾವುದೇ ಹುದ್ದೆಗಳು ಮಂಜೂರಾಗದ ಕಾರಣ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿಕೊಂಡಿರುವುದಿಲ್ಲ.<br><br>2018 ರಲ್ಲಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವು ರಚನೆಗೊಂಡ ನಂತರ ಪಿಲಿಕುಳ ನಿಸರ್ಗಧಾಮದ ಸಿಬ್ಬಂದಿಗಳು ಪ್ರಾಧಿಕಾರದ ಆಡಳಿತ ವ್ಯಾಪ್ತಿಗೆ ಒಳಪಡುತ್ತದೆ.<br><br>ಪ್ರಸ್ತುತ ಪಿಲಿಕುಳ ನಿಸರ್ಗಧಾಮ ಮತ್ತು ಮಂಗಳೂರಿನ ಪ್ರಾದೇಶಿಕ ವಿಜ್ಞಾನ ಕೇಂದ್ರದ ಹುದ್ದೆಗಳನ್ನು ಒಳಗೊಂಡಂತೆ ಹೊಸದಾಗಿ ರಚನೆಯಾಗಿರುವ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆಗೆ ಅನುಮೋದನೆ ಕೋರಿ 2025ರ ಜನವರಿ ಮಾಹೆಯಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಸೊಸೈಟಿ (ಕೆಸ್ಟೆಪ್ಸ್) ಸಂಸ್ಥೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಯು ಪರಿಶೀಲನೆಯ ಹಂತದಲ್ಲಿದೆ. |

ಸಂಖ್ಯೆ: ಐಟಿಬಿಟಿ 81 ಎಸ್ ಟಿಎಸ್ 2025

(ಎನ್.ಎಸ್. ಭೋಸರಾಜು)
ಮಾನ್ಯ ಸಣ್ಣ ನೀರಾವರಿ,
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು